ಬದಲಾಯಿಸಿ ಹೋಗುವ ಪ್ರಾಯದ ಹುಡುಗನಿಗೆ ಇವಳು ಹೀಗೆ ಸತ್ಕಾರ ಮಾಡುವುದು ಅದೆಷ್ಟು ಪರಿಚಿತ ಸಂಗತಿಯಾಗಿದೆ.'ಚಹಾ ಕುಡಿದು ಕೆಲಸ ಮಾಡಕ್ಕಾಗಲ್ವ ನಿಮ್ಗೆ, ಬನ್ನಿ ಎರಡು ಗುಟುಕು ಸವಿದು ಹೋಗಿ' ಎಂದು ಜುಲುಮೆ ಮಾಡುವ ಇವಳ ಹೆಸರು, ವಿಳಾಸ ಸಹ ಗೊತ್ತಿಲ್ಲ, ಆದರೆ, ಮಹೋನ್ನತವಾದ ಒಂದು ಪರಿಚಯವಿದೆ.

* * *

ನೆನ್ನೆಯ ಸಂಜೆ ಹಳದಿ ಬಣ್ಣದ ಶರ್ಟಿನಲ್ಲಿ ಮೊದಲೆರೆಡು ಬಟನ್ ಹಾಕದ ಹುಡುಗ ಓಟಿಯಿಂದ ತುಸು ದೂರ ಹಾಕಿದ್ದ ಕಬ್ಬಿಣದ ಚೇರಿನಲ್ಲಿ ಚಿಂತಾಕ್ರಾಂತನಾಗಿ ಕೂತಿದ್ದ. ಮಧ್ಯಾಹ್ನದಿಂದ ರಕ್ತದಾನಿಗಳನ್ನು ಹುಡುಕಿ ಹೊಂದಿಸುವಲ್ಲಿ ಇವನ ಬೆವರು ಕಿತ್ತು ಬಂದಿತ್ತು. ನರ್ಸುಗಳು ಆಗಾಗ್ಗೆ ಬಂದು 'ಇನ್ನಿಬ್ಬರು ಡೋನರ್ ಬೇಕು' ಎಂದಾಗ ಯಾರಿಗೋ ಕರೆ ಮಾಡಿ, ರಕ್ತದಾನಿಗಳ ಬಳಿ ಮಾತಾಡುತ್ತಾ 'ಬೇಗ ಬನ್ನಿ' ಎಂದು ಅಲವತ್ತುಕೊಳ್ಳುತ್ತಿದ್ದ. ಆಗಾಗ ಉಗುರು ಕಚ್ಚುತ್ತಿದ್ದ. ತನ್ನ ಉದ್ದ ಕೂದಲನ್ನು ನೇವರಿಸಿಕೊಳ್ಳುತ್ತಿದ್ದ. ಇವಳು ಸಾದಾ ನಸುಗೆಂಪು ಸೀರೆಯಲ್ಲಿದ್ದಳು. ಥರ್ಮಾ ಫ್ಲಾಸ್ಕಿನಲ್ಲಿ ಕೊನೆಯ ಎರಡು ಕಪ್ಪು ಚಹಾ ಉಳಿದಿತ್ತು.

ದೂರದಿಂದಲೇ ಇವನನ್ನು ಗಮನಿಸಿ ಹತ್ತಿರ ಬಂದು ಕುಳಿತಳು. 'ಚಹಾ ಬೇಕಾ' ಎಂದಳು. 'ಬೇಡ' ಎಂದ ಹುಡುಗ ಮತ್ತೆ ಯೋಚಿಸುತ್ತಾ ಕೂತ. ಥರ್ಮಾ ಫ್ಲಾಸ್ಕನ್ನು ಒತ್ತಿ ಒಂದು ಕಪ್ಪು ಚಹಾ ಹಿಡಿದುಕೊಂಡಳು. ಹುಡುಗ ಇವಳ ಕಡೆ ನೋಡಿ 'ಒಂದು ಕಪ್ ಕೊಡಿ, ಬಹಳ ಆತಂಕವಾಗ್ತಿದೆ' ಎಂದ. ನಗುತ್ತಾ ಚಹಾವನ್ನು ಕೊಟ್ಟಳು. ಒಂದು ಹನಿ ಹೀರಿ 'ಬಹಳ ಚನಾಗಿದೆ' ಎಂದ. ಇವಳು ದೈನ್ಯತೆಯಿಂದ ನಕ್ಕಳು. 'ಯಾರಿದ್ದಾರೆ ಒಳಗೆ' ಎಂದು ಕೇಳಿದಳು. 'ಅಪ್ಪನಿಗೆ ಕಿಡ್ನಿ ಟ್ರಾನ್ಸಪ್ಲಾಂಟ್ ನಡಿತಿದೆ' ಎಂದ. 'ಯೋಚಿಸಬೇಡಪ್ಪಾ, ಎಲ್ಲಾ ಒಳ್ಳೆದಾಗ್ತದೆ' ಎಂದಳು. 'ಚಹಾ ತುಂಬಾ ಚನಾಗಿದೆ, ಅಪ್ಪ ಸಹ ಹೀಗೆ ಚನಾಗಿ ಚಹಾ ಮಾಡ್ತಾನೆ' ಎಂದ. ಇವಳು ಅವನನ್ನು ನೋಡುತ್ತಾ ತನ್ನ ಮಗನನ್ನು ಅವನಲ್ಲಿ ಕಾಣುತ್ತಿದ್ದಳು. 'ನಿಮ್ಮವರು ಯಾರಾದರೂ ಓಟಿಯಲ್ಲಿದ್ದಾರ' ಎಂದ. 'ಇಲ್ಲ, ನಿಮ್ಮ ಜೊತೆ ಚಹಾ ಕುಡಿಯೋದಕ್ಕೆ ಬಂದೆ' ಎನ್ನುತ್ತಾ ತಾನೊಂದು ಕಪ್ಪಿನಲ್ಲಿ ಚಹಾ ಹಾಕಿಕೊಂಡು ಮೆಲ್ಲಗೆ ಗುಟುಕೊಂದು ಹೀರಿದಳು. ಹುಡುಗ ಅಚ್ಚರಿಯ ಕಣ್ಣು ಹಿಗ್ಗಿಸುತ್ತಾ 'ಅರ್ಥ ಆಗಲಿಲ್ಲ' ಎಂದ. 'ಇಲ್ಲಪ್ಪಾ, ನಾನಿಲ್ಲಿಯೇ ಆಸ್ಪತ್ರೆ ಸಮೀಪ ಇರುತ್ತೇನೆ, ಮನೆಯಲ್ಲಿ ಒಬ್ಳೆ ಇರ್ತೆನೆ, ಚಹಾ ಕುಡಿಯೋದಕ್ಕೆ ಬೇಸರ, ಹಾಗಾಗಿ ನಿಮ್ಮ ಜೊತೆಗೆ ಕುಡಿಯೋದಕ್ಕೆ ಬರ್ತಿನಿ' ಎಂದಳು. ಹುಡುಗನ ಕಣ್ಣಿನಲಿ ಒಂದು ಹನಿ ಒಡನೆ ಒಡಮೂಡಿತು.

'ಚಿಂತೆ ಮಾಡ್ಬೇಡ ಹುಡುಗ, ಮತ್ತೆ ಬರ್ತಿನಿ, ಹೊತ್ತಾಯ್ತು, ಚಹಾ ಕಪ್ಪನ್ನು ಕಸದ ಬುಟ್ಟಿಗೆ ಹಾಕು, ಎಲ್ಲೆಂದರಲ್ಲಿ ಹಾಕಬೇಡಪ್ಪಾ' ಎಂದು ಥರ್ಮಾ ಫ್ಲಾಸ್ಕು ಹಿಡಿದು ಹೊರಟಳು. ತನ್ನ ಅಪ್ಪನ ಟ್ರಾನ್ಸಪ್ಲಾಂಟಿಗೆ ಬಂದ ಹುಡುಗ ಇನ್ನೂ ಅನ್ಯಮನಸ್ಕನಾಗಿ ಕೂತಿದ್ದ. ಇವಳು ಓಪಿಡಿ ಕೌಂಟರ್ ದಾಟುತ್ತಿದ್ದಳು. ಹುಡುಗ ಓಡಿದ. 'ನೀವು ಯಾರು ಅನ್ನುವುದೇ ಗೊತ್ತಿಲ್ಲ, ಚಹಾ ಕೊಟ್ಟು ಸಾಂತ್ವನದ ಮಾತು ಆಡಿದಿರಿ, ಅಮ್ಮನ ಹಾಗೆ ಬಂದು ಚಿಂತೆ ಮಾಡ್ಬೇಡ ಎಂದಿರಿ' ಎಂದ. 'ನಿನ್ನ ಕಂಡ ಕೂಡಲೇ ನನ್ನ ಮಗ ನೆನಪಾದ ಕಣೋ, ಅದಕ್ಕೆ ನಿನ್ನ ಹತ್ತಿರ ಬಂದೆ, ಒಂದು ಮಾತು ಹೇಳಲಾ, ಸಮಾಧಾನ ಮಾತು ಆಡಲು ಹೆತ್ತವರೇ, ಸಂಬಂಧಿಕರೇ ಆಗಬೇಕು ಇಲ್ಲವೆಂದಿಲ್ಲ, ನಾವು ಮನುಷ್ಯರು ಕಣಪ್ಪಾ, ಒಬ್ಬರಿಗೊಬ್ಬರು ಸ್ಪಂದಿಸಬೇಕು, ಮತ್ತೆ, ನಾನು ಯಾರು ಎಂದು ಕೇಳಬೇಡಪ್ಪ' ಎಂದು ಹೊರಟಳು. ಹುಡುಗ ಹಿಡಿದುಕೊಂಡ ಖಾಲಿ ಚಹಾ ಕಪ್ಪಿನಲ್ಲಿ ಇನ್ನೊಂದು ಹನಿ ಬಿತ್ತು. ಬೈಕಿನಲ್ಲಿ ತುರ್ತಾಗಿ ಬಂದ ರಕ್ತದಾನಿಗಳು ಇವನನ್ನು ಸೇರಿಕೊಂಡರು. ಇವಳು ಕತ್ತಲಲ್ಲಿ ಮರೆಯಾದಳು.

ಇವಳು ಬಸ್ಸು ಹತ್ತಿ ಮನೆಗೆ ಹೋಗಿ ಮೈ ಚೆಲ್ಲಿದರೂ ಪ್ರಖರ ಬೆಳಕಿನ ಓಟಿಯಲ್ಲಿ ನಡೆಯುತ್ತಿರುವ ಸ್ಕಾಲ್ಪೆಲ್ಲಿನ ಸದ್ದುಗಳು, ಹತ್ತಿಯಿಂದ ರಕ್ತದಲ್ಲಿ ಅದ್ದಿದ ಪ್ರಯತ್ನಗಳು, ಎದೆಬಡಿತ ನೆನಪಿಡುವ ಮೀಟರುಗಳು, ಸೂಕ್ಷ್ಮ ಹೊಲಿಗೆ ಹಾಕುವ ಕೈಗಳು ನೆನಪಾಗುತ್ತಿದ್ದವು. ನಾನು ಬಟ್ಟೆ ತೊಳೆಯಲು ನೀರು ತುಂಬಿದ ಬಕೆಟ್ಟಿನಲ್ಲಿ ನೀಲಿಯ ಒಂದು ಹನಿ ಹಾಕಿದಂತೆ ಆ ಒಂದು ಹನಿಯೇ ಇಡೀ ಬಕೆಟ್ಟನ್ನು ಅತ್ಯಂತವಾಗಿ ತುಂಬಿಕೊಳ್ಳುವಂತೆ ಓಟಿಯಲ್ಲಿ ರೋಗಿಯೊಬ್ಬನ ದೇಹದಿಂದ ತೆಗೆದ ರಕ್ತದ ಹನಿಯೂ ಸಹ ಹಾಗೆ ಅಲ್ಲವೇ ಪೂರ್ತಿ ಎಂಟು ಇಂಚಿನ ಸ್ಟೀಲಿನ ಸರ್ಜಿಕಲ್ ಟ್ರೇ ತುಂಬಿಕೊಳ್ಳುತ್ತದೆ.